ಆ) ಈ ಪದ್ಧತಿ ಹಿಂದಿನಿಂದ ಇದ್ದು ಈಗ ಅದನ್ನೆ ತೆಗೆದಿದ್ದರೆ ಕಾರಣಗಳೇನು;

ಇ) ಹಿಂದಿನ ಈ ಪದ್ಧತಿಯನ್ನು ತೆಗೆದಿದ್ದರಿಂದ ಕಳಪೆ ಕಾಮಗಾರಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಪ್ರಸಕ್ತದಲ್ಲಿ ಈ ಪದ್ಧತಿ ಇರುವುದಿಲ್ಲ.

ಆ) ಎಂ.ಓ.ಆರ್.ಟಿ.ಹೆಚ್. (Ministry of Road Transport and Highways) ವತಿಯಿಂದ ಹೊರಡಿಸಲಾದ ಪರಿಷ್ಕರಿಸಿದ ಕಾಮಗಾರಿಯ ವಿಶಿಷ್ಟ ವಿವರಣೆಯಂತೆ ಹಿಂದಿನ ಪದ್ಧತಿಯನ್ನು ತೆಗೆದು ಹಾಕಲಾಗಿದೆ.

ಇ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

442 (149) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ಕ್ಷೇತ್ರದಲ್ಲಿ ಈ ಕೆಳಕಂಡ ರಸ್ತೆಗಳಲ್ಲಿ ಸೇತುವೆ ಕಾಮಗಾರಿಗಳು ಅತೀ ಅವಶ್ಯವಿರುವುದು ನಿಜವಲ್ಲವೆ;

1) ಗದಗ ತಾಲ್ಲೂಕು ಹಾತಲಗೇರಿ–ಲಕ್ಕುಂಡಿ ರಸ್ತೆಯ ಕಿ.ಮೀ 3.00 ರಲ್ಲಿ ಹದ್ದಿಗಳ್ಳಿ ಸೇತುವೆ ನಿರ್ಮಾಣ

2) ಮುಂಡರಗಿ ತಾಲ್ಲೂಕು ದುಂದೂರ–ಬಿದರಹಳ್ಳಿ ರಸ್ತೆಯ ಕಿ.ಮೀ 63.15 ರಲ್ಲಿ ಸೇತುವೆ ನಿರ್ಮಾಣ

3) ಮುಂಡರಗಿ ತಾಲ್ಲೂಕು ದುಂದೂರ–ಬಿದರಹಳ್ಳಿ ರಸ್ತೆಯ ಕಿ.ಮೀ 72.30ರಲ್ಲಿ ಸೇತುವೆ ನಿರ್ಮಾಣ

4) ಗದಗ ತಾಲ್ಲೂಕು ಕಳಸಾಪೂರ–ಮಹಾಲಿಂಗಾಪುರ ರಸ್ತೆಯ ಕಿ.ಮೀ 4.00ರಲ್ಲಿ ಸೇತುವೆ ನಿರ್ಮಾಣ

5) ಮುಂಡರಗಿ ತಾಲ್ಲೂಕು ಬರದೂರ–ಹಳ್ಳಿಗುಡಿ ರಸ್ತೆಯ ಕಿ.ಮೀ 7.10ರಲ್ಲಿ ಸೇತುವೆ ನಿರ್ಮಾಣ

ಅ) ಹಾಗಿದ್ದಲ್ಲಿ ಈ ಸೇತುವೆಗಳು ನಿರ್ಮಾಣವಾಗದ ಪ್ರಯುಕ್ತ ಹಲವಾರು ಅಪಘಾತಗಳಾಗಿ ಮರಣ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ಎಲ್ಲಾ ಕೆಲಸಗಳನ್ನು R.I.D.F ಅಥವಾ K.R.D.C.L ಮತಿಯಿಂದ ತೆಗೆದುಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಕ್ರಮ ಸಂಖ್ಯೆ (1) ಮತ್ತು (4) ರಲ್ಲಿ ನಮೂದಿಸಿರುವ ಸೇತುವೆ ಕಾಮಗಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು ಸೇತುವೆಗಳ ನಿರ್ಮಾಣದ ಅವಶ್ಯಕತೆ ಇರುತ್ತದೆ.

ಕ್ರ.ಸಂಖ್ಯೆ 2, 3 ಮತ್ತು 5 ರಲ್ಲಿ ನಮೂದಿಸಿದ ಸೇತುವೆ ಕಾಮಗಾರಿಗಳು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದ್ದು ಸೇತುವೆ ನಿರ್ಮಾಣದ ಅವಶ್ಯಕತೆ ಇರುತ್ತದೆ.

ಆ) ಪ್ರಶ್ನೆ (ಅ) ರಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ (4) ರಲ್ಲಿ ಸೇತುವೆ ನಿರ್ಮಾಣದ ಸ್ಥಳದಲ್ಲಿ ರಭಸದಿಂದ ನೀರು ಬಂದು ಜಾನುವಾರುಗಳು ಮತ್ತು ಜನರು ಕೊಚ್ಚಿಕೊಂಡು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಕ್ರಮ ಸಂಖ್ಯೆ 1,2,3 ಮತ್ತು 5 ರಲ್ಲಿ ನಮೂದಿಸಿರುವ ಸೇತುವೆಗಳ ಕೆಲಸ ನಿರ್ಮಾಣವಾಗದ ಕಾರಣದಿಂದಾಗಿಯೇ ಅಪಘಾತ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಕ್ರಮ ಸಂಖ್ಯೆ (1) ರಲ್ಲಿರುವ ಕಾಮಗಾರಿಗೆ ಯಾವುದೇ ಅನುದಾನದಲ್ಲಿ ಪ್ರಸ್ತಾವನೆ ಇರುವುದಿಲ್ಲ.

ಕ್ರಮ ಸಂಖ್ಯೆ (4) ರಲ್ಲಿರುವ ಗದಗ ತಾಲ್ಲೂಕು ಗದಗ ಕಳಸಾಪುರ ಮಹಾಲಿಂಗಪೂರ ರಸ್ತೆ ಗ್ರಾಮೀಣ ರಸ್ತೆಯಾಗಿದ್ದು, ಈ ರಸ್ತೆಗೆ 6 ಚಿಕ್ಕ ಪೇವಡಿಪ್ಪಗಳ ನಿರ್ಮಾಣದ ಅವಶ್ಯಕತೆ ಇದ್ದು, 2006–07 ನೇ ಸಾಲಿನ 12 ಹಣಕಾಸಿನ ಯೋನಜೆ ಅಡಿಯಲ್ಲಿ 3 ಪೇವಡಿಪ್ಪಗಳನ್ನು ನಿರ್ಮಾಣ ಮಾಡಲಾಗಿದೆ. ಇನ್ನುಳಿದ 3 ಪೇವಡಿಪ್ಪಗಳ ನಿರ್ಮಾಣಕ್ಕೆ ರೂ. 10.00 ಲಕ್ಷಗಳ ಅವಶ್ಯವಿದೆ. 2007–08 ನೇ ಸಾಲಿನಲ್ಲಿ ಈ ಪೇವಡಿಪ್ಪಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.

ಕ್ರಮಸಂಖ್ಯೆ 2, 3, ಮತ್ತು 5 ರಲ್ಲಿ ನಮೂದಿಸಿರುವ ಸೇತುವೆಗಳ ನಿರ್ಮಾಣದ ಪ್ರಸ್ತಾವನೆಗಳು ಪರಿಶೀಲನೆಯಲ್ಲಿದ್ದು ಯಾವುದಾದರು ಯೋಜನೆಯಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಕೈಗೊಳ್ಳಲು ಪರಿಗಣಿಸಲಾಗುವುದು.

443 (274) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೀದಿ ನಾಯಿಗಳ ಸಂಖ್ಯೆ ಎಷ್ಟು;

ಆ) ಬೀದಿ ನಾಯಿಗಳಿಂದ ಯಾವ ಯಾವ ಪಟ್ಟಣದಲ್ಲಿ ಎಷ್ಟು ಜನ ಕಡಿತಕ್ಕೊಳಗಾಗಿ ಸತ್ತಿದ್ದಾರೆ. ಮತ್ತು ಎಷ್ಟು ಜನ ಗಾಯಗೊಂಡಿದ್ದಾರೆ (ವಿವರ ನೀಡುವುದು);

ಇ) ಈ ಬೀದಿ ನಾಯಿಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಬೀದಿ ನಾಯಿಗಳಿಂದ ಅಪಘಾತಕ್ಕೊಳಗಾದವರಿಗೆ ಸರಕಾರ ಪರಿಹಾ ನೀಡಿರುವುದೇ (ವಿವರ ನೀಡುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ 9,52,788 ಬೀದಿ ನಾಯಿಗಳಿವೆ.)

ಆ) ಬೀದಿ ನಾಯಿಗಳ ಕಡಿತದಿಂದ ಬೆಂಗಳೂರು ನಗರದಲ್ಲಿ ಇಬ್ಬರು ರೇಬೀಸ್‌ನಿಂದ ಓರ್ವ ವ್ಯಕ್ತಿ ಹಾಗೂ ಇಬ್ಬರು ಮಕ್ಕಳು ಮರಣ ಹೊಂದಿದ್ದಾರೆ ಹಾಗೂ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಾಲ್ಕು ವ್ಯಕ್ತಿಗಳು ಮರಣ ಹೊಂದಿದ್ದಾರೆ.

<u>ನಾಯಿ ಕಡಿತದಿಂದ ಈ ಕೆಳಕಂಡಂತೆ ಜನರು ಗಾಯಗೊಂಡಿರುತ್ತಾರೆ.</u>

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ – 7289

2) ಇತರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ – 3529

3) ನಗರಸಭೆ/ಪುರಸಭೆ/ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ – 13694

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡುಗಳಲ್ಲೂ ಹಗಲು ಮತ್ತು ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿ, ಸಂತಾನಹರಣ ಶಸ್ತ್ರ ಚಿಕಿತ್ಸೆಯ ಜೊತೆಗೆ ಸಮಸ್ಯಾತ್ಮಕ ನಾಯಿಗಳನ್ನು ದಯಾಮರಣಕ್ಕೆ ಪಡಿಸಲಾಗುತ್ತಿದೆ.